ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಏರ್‌ಪೋರ್ಟ್ ಸಿಬ್ಬಂದಿಗೆ ತರಬೇತಿ

ಬೆಂಗಳೂರು: ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಐಎನ್‌ಎಂಎಎಸ್ ಮತ್ತು ಎನ್‌ಡಿಆರ್‌ಎಫ್ ವತಿಯಿಂದ ಕೆಮಿಕಲ್, ಬಯೋಲಾಜಿಕಲ್, ರೇಡಿಯೋಲಾಜಿಕಲ್ ನ್ಯೂಕ್ಲಿಯರ್‌ನಿಂದ ವಿಮಾನ ನಿಲ್ದಾಣದಲ್ಲಿ ಸಂಭವಿಸಬಹುದಾದ ತುರ್ತು ನಿರ್ವಹಣೆ ಕುರಿತು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಿಬ್ಬಂದಿಗೆ ತರಬೇತಿ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿ ಕುನಾಲ್ ಶರ್ಮ, ನ. 17ರವರೆಗೂ ಈ ತರಬೇತಿ ನಡೆಯಲಿದ್ದು, ವಿಮಾನ ನಿಲ್ದಾಣದ ಸಿಬ್ಬಂದಿಗಳು ಯಾವ ರೀತಿ ತಯಾರಾಗಬೇಕು, ತುರ್ತು ಸಂದರ್ಭದಲ್ಲಿ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕು, ಹೇಗೆ ನಿರ್ವಹಣೆ ಮಾಡಬೇಕು ಅನ್ನೋದನ್ನು ಹೇಳಿಕೊಡಲಾಗುತ್ತಿದೆ.

ಕೊನೆಯ ದಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇದರ ಕುರಿತು ಅಣುಕು ಪ್ರದರ್ಶನ ಮಾಡಲಾಗುವುದು ಎಂದರು. ಈ ತರಬೇತಿಗೆ ನೂರಾರು ಏರ್‌ಪೋರ್ಟ್ ತುರ್ತು ನಿರ್ವಹಣಾ ಸಿಬ್ಬಂದಿಗಳು ಭಾಗವಹಿಸಿದ್ದರು.

ಮೆಟ್ಟಿಲು ಹತ್ತುವ ವೇಳೆ ಹೃದಯಾಘಾತದಿಂದ ಮಹಿಳೆ ಸಾವು

ಮೈಸೂರು: ಮನೆಯ ಮೆಟ್ಟಿಲು ಹತ್ತುವ ವೇಳೆ ತೀವ್ರ ಹೃದಯಾಘಾತವಾಗಿ ಮಹಿಳೆ ಸಾವನ್ನಪ್ಪಿದ ಘಟನೆ ಮೈಸೂರಿನ ರಾಮಕೃಷ್ಣ ನಗರದಲ್ಲಿ ನಡೆದಿದೆ.

ಮೃತರನ್ನು ರಾಮಕೃಷ್ಣ ನಗರ ನಿವಾಸಿ ಪುರುಷೋತ್ತಮ ಪತ್ನಿ ಶೈಮಾ (45) ಎಂದು ಗುರುತಿಸಲಾಗಿದೆ. ಕೇರಳದಲ್ಲಿ ನಡೆದ ಮದುವೆ ಸಮಾರಂಭ ಮುಗಿಸಿ ಕುಟುಂಬಿಕರೊಂದಿಗೆ ಮನೆಗೆ ಆಗಮಿಸಿದ ಅವರು ಮನೆಯ ಮೆಟ್ಟಿಲು ಏರುವಾಗ ಹಠಾತ್ತನೆ ಎದೆನೋವು ಕಾಣಿಸಿಕೊಂಡು ಸಾವನ್ನಪ್ಪಿದ್ದಾರೆ ಎನ್ನಲಾಗಿದ್ದು, ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಧ್ಯಮಗಳು ಜನತೆಯನ್ನು ಜಾಗೃತಿಗೊಳಿಸುವ ಬದಲಿಗೆ ಮೌಢ್ಯಕ್ಕೆ ತಳ್ಳುತ್ತಿವೆ: ಪ್ರೊ. ಮೊರಬದ ಮಲ್ಲಿಕಾರ್ಜುನ ವಿಷಾದ

ಮೈಸೂರು: ಇಂದಿನ ಮಾಧ್ಯಮಗಳು ಜನತೆಯನ್ನು ಜಾಗೃತಿಗೊಳಿಸುವ ಬದಲಿಗೆ ಮೌಢ್ಯಕ್ಕೆ ತಳ್ಳುತ್ತಿವೆ. ಸಮಾಜವು ಹಲವು ಸೂತಕಗಳ ಸಂಕೋಲೆಗಳಲ್ಲಿಯೂ ಬದುಕು ನಡೆಸುತ್ತಿದೆ ಎಂದು ಲೇಖಕ ಪ್ರೊ. ಮೊರಬದ ಮಲ್ಲಿಕಾರ್ಜುನ ವಿಷಾದ ವ್ಯಕ್ತಪಡಿಸಿದರು.

ನಗರದ ಶ್ರೀಹೊಸಮಠದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಕಾರ್ತೀಕ ಮಾಸದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಸೀದಿ ಮಂದಿರಗಳಿಗಾಗಿ ಇಂದು ಯುದ್ಧ ಕಲಹಗಳೇ ನಡೆಯುತ್ತಿರುವ ಈ ದಿನಮಾನಗಳಲ್ಲಿ ಶರಣರು ಮತ್ತು ಅವರ ಚಿಂತನೆಗಳು ಪ್ರಸ್ತುತವಾಗುತ್ತವೆ ಎಂದರು. 'ಹನ್ನೆರಡನೆಯ ಶತಮಾನದ ಶರಣ ವಚನಗಳೇ ಮನುಷ್ಯನ ಜೀವನವನ್ನು ಮುನ್ನಡಿಸುವ ದೀಪಮೂರ್ತಿ ಹಾಗೂ ಅಂತರಂಗವನ್ನು ಬೆಳಗಿಸುವ ದೀಪಗಳು ಮನುಷ್ಯ ಬೆಳಕನ್ನು ಇನ್ನೆಲ್ಲೋ ಹುಡುಕುವ ಬದಲು ತನ್ನಲ್ಲೇ ಆ ಬೆಳಕನ್ನು ಕಂಡುಕೊಳ್ಳುವ ಚಿಂತನೆಗಳನ್ನು ಶರಣರು ಹುಟ್ಟು ಹಾಕಿದರೆಂಬುದನ್ನು ಹಲವು ನಿದರ್ಶನಗಳ ಮೂಲಕ ತಿಳಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಹೊಸಮಠಾಧ್ಯಕ್ಷರಾದ ಚಿದಾನಂದ ಮಹಾಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷತೆಯನ್ನು ಪ್ರೊ. ಸಿ.ಎಂ. ಧರ್ಮಪ್ಪನವರು, ನಿವೃತ್ತ ಪ್ರಾಚಾರ್ಯರು, ಎಸ್.ಜೆ.ಎಂ. ಪದವಿ ಕಾಲೇಜು, ಚಿತ್ರದುರ್ಗ ಇವರು ವಹಿಸಿದ್ದರು. ಚೂಡಾಮಣಿ ಪ್ರಾರ್ಥಿಸಿದರೆ, ಸುಮ ಅವರು ಸ್ವಾಗತಿಸಿ, ಉಮಾ ಮಹೇಶ್ವರಿ ವಂದಿಸಿದರು. ಕಾರ್ಯಕ್ರಮವನ್ನು ಸಿಂಧು ನಿರೂಪಿಸಿದರು.

ಕಾಲು ಬಾಯಿ ರೋಗದಿಂದ ಜಾನುವಾರುಗಳ ಸಾವು

ತುಮಕೂರು: ಕೊರಟಗೆರೆ ತಾಲ್ಲೂಕಿನಲ್ಲಿ ಕಾಲು ಬಾಯಿ ರೋಗದಿಂದ ಜಾನುವಾರುಗಳು ಸಾವನ್ನಪ್ಪುತ್ತಿರುವ ಘಟನೆ ನಡೆದಿದೆ.

ತಾಲ್ಲೂಕಿನ ಬುರುಗನಹಳ್ಳಿ ಗ್ರಾಮದ ಹನುಮಂತರಾಯಪ್ಪ ಅವರಿಗೆ ಸೇರಿದ ಜಾನುವಾರುಗಳು ಕಾಲು ಬಾಯಿ ರೋಗದಿಂದ ಸಾವನ್ನಪ್ಪಿವೆ. ತಾಲ್ಲೂಕಿನಲ್ಲಿ ಕಾಲು ಬಾಯಿ ರೋಗದಿಂದ ಜಾನುವಾರುಗಳು ಸಾವನ್ನಪ್ಪುತ್ತಿದ್ದು, ಸಾಲ ಮಾಡಿ ಹಸು ತಂದು ಸಾಕಾಣಿಕೆ ಮಾಡಿ ಜೀವನ ನಡೆಸುತ್ತಿದ್ದ ರೈತರು ಕಂಗಾಲಾಗಿದ್ದಾರೆ. ತಾಲ್ಲೂಕಿನಲ್ಲಿ ಜಾನುವಾರುಗಳು ಸಾವನ್ನಪ್ಪುತ್ತಿದ್ದರೂ ಜನಪ್ರತಿನಿಧಿಗಳು ಹಾಗೂ ತಾಲ್ಲೂಕು ಆಡಳಿತ ಅಧಿಕಾರಿಗಳು ಈ ಬಗ್ಗೆ ಗಮನಹರಿಸುತ್ತಿಲ್ಲ. ಈ ಕೂಡಲೇ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ಕಡೆ ಗಮನ ಹರಿಸಬೇಕೆಂದು ರೈತರು ಅಗ್ರಹಿಸಿದ್ದಾರೆ.

ಬಂಗಾರಪೇಟೆ: ರೈಲಿನಲ್ಲಿ ಮಗುವಿಗೆ ಜನ್ಮ ನೀಡಿದ ತಾಯಿ

ಬೆಂಗಳೂರು: ನಗರದಿಂದ ಪಾಟ್ನಾಗೆ ಸಂಘಮಿತ್ರ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೋಗುತ್ತಿದ್ದ ತಾಯಿಯೊಬ್ಬರು ಮಾಲೂರಿನ ಟೇಕಲ್ ಬಳಿ ಗಂಡು ಮಗುವಿಗೆ ಜನ್ಮ ನೀಡಿದ್ದು, ತಾಯಿ-ಮಗು ಆರೋಗ್ಯವಾಗಿದ್ದಾರೆ.

ಬೆಂಗಳೂರಿನಿಂದ ಪಾಟ್ನಾಗೆ ತೆರಳುತ್ತಿದ್ದ ಸಂಘಮಿತ್ರ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೋಗುತ್ತಿದ್ದ ತಮಿಳುನಾಡು ಕಾಟ್‌ಪಾಡಿ ಮೂಲದ 25 ವರ್ಷದ ಮಾಲತಿ ಎನ್ನುವ ಮಹಿಳೆಗೆ ಮಾಲೂರು ಬಳಿ ಹೊಟ್ಟೆ ನೋವು ಕಾಣಿಸಿಕೊಂಡು ಟೇಕಲ್ ಬಳಿ ಪ್ರಸವ ಆಗಿದೆ. ಮಾಲತಿ ಹಾಗೂ ಮುನಿಸ್ವಾಮಿ ದಂಪತಿ ನಗರದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ಹೆರಿಗೆಗಾಗಿ ಬೆಂಗಳೂರಿನಿಂದ ಕಾಟ್‌ಪಾಡಿಗೆ ತೆರಳುತ್ತಿದ್ದ ವೇಳೆ ಟೇಕಲ್ ಬಳಿ ರೈಲಿನಲ್ಲೇ ಹೆರಿಗೆಯಾಗಿದೆ. ತಾಯಿ-ಮಗು ಆರೋಗ್ಯವಾಗಿದ್ದು, ಕೂಡಲೇ ಸಹ ಪ್ರಯಾಣಿಕರು 108ಗೆ ಕರೆ ಮಾಡಿ ತಾಯಿ-ಮಗು ಇಬ್ಬರನ್ನು ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಡೆದು ಹೋಗುತ್ತಿದ್ದವರನ್ನು ಅಡ್ಡಗಟ್ಟಿ ದರೋಡೆ

ಬೆಂಗಳೂರು: ನಡೆದುಕೊಂಡು ಹೋಗುತ್ತಿದ್ದ ಇಬ್ಬರನ್ನು ಅಡ್ಡಗಟ್ಟಿದ ಮೂವರು ದರೋಡೆಕೋರರು ಮಚ್ಚಿನಿಂದ ಹಲ್ಲೆ ನಡೆಸಿ 20 ಗ್ರಾಂ ತೂಕದ ಎರಡು ಚಿನ್ನದ ಸರ ಹಾಗೂ ಮೊಬೈಲ್ ಕಸಿದು ಪರಾರಿಯಾಗಿರುವ ಘಟನೆ ಸಂಪಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಭಿಷೇಕ್ ಹಾಗೂ ಈತನ ಸ್ನೇಹಿತ ದರೋಡೆಗೆ ಒಳಗಾದವರು. ಈ ಇಬ್ಬರು ಮಂಗಳವಾರ ಬೆಳಗಿನ ಜಾವ 1.30ರ ಸುಮಾರಿಗೆ ಮಾನ್ಯತಾ ಟೆಕ್‌ಪಾರ್ಕ್ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಒಂದೇ ಬೈಕ್‌ನಲ್ಲಿ ಬಂದ ಮೂವರು ದರೋಡೆಕೋರರು ಅವರನ್ನು ಅಡ್ಡಗಟ್ಟಿ ಮಚ್ಚಿನಿಂದ ಹಲ್ಲೆ ನಡೆಸಿ ಒಬ್ಬನಿಂದ 10 ಗ್ರಾಂ ತೂಕದ ಚಿನ್ನದ ಸರ ಹಾಗೂ ಮತ್ತೊಬ್ಬನಿಂದ 10 ಗ್ರಾಂ ತೂಕದ ಚಿನ್ನದ ಸರ ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಇವರಿಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಈ ಸಂಬಂಧ ಸಂಪಿಗೆಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಟ್ರಾಫಿಕ್ ಪೇದೆಗೆ ಆಟೋ ಚಾಲಕನಿಂದ ಹಲ್ಲೆ: ಬಂಧನ

ಬೆಂಗಳೂರು: ಆಟೋನ ಆಟೋ ಸ್ಟಾಂಡ್‌ಗೆ ಹಾಕು ಎಂದು ಹೇಳಿದ ಟ್ರಾಫಿಕ್ ಪೊಲೀಸ್ ಪೇದೆಯೊಬ್ಬರಿಗೆ ಆಟೋ ಚಾಲಕ ಹಲ್ಲೆ ನಡೆಸಿರುವ ಘಟನೆ ಕೆ.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಸಂಚಾರಿ ಪೊಲೀಸ್ ಪೇದೆ ರಾಜಸಾಬ್ ದೋಣಿ ಎಂಬುವವರು ಆಟೋ ಚಾಲಕನಿಂದ ಹಲ್ಲೆಗೊಳಗಾದವರು. ಇವರು ಆಟೋ ಚಾಲಕ ಮಹಮ್ಮದ್ ಖಯೂಂ ಎಂಬುವವರಿಗೆ ಆಟೋವನ್ನು ಆಟೋ ಸ್ಟಾಂಡ್‌ಗೆ ಹಾಕು ಎಂದು ಹೇಳಿದ್ದಾರೆ. ಈ ವೇಳೆ ಕೋಪಗೊಂಡ ಮಹಮ್ಮದ್ ಖಯೂಂ ರಸ್ತೆ ಮಧ್ಯೆ ಸಾರ್ವಜನಿಕರ ಎದುರೇ ಪೊಲೀಸ್ ಪೇದೆ ರಾಜಸಾಬ್ ಅವರ ಕೈ ತಿರುಗಿಸಿ ಮುಖಕ್ಕೆ ಹೊಡೆದು ಹಲ್ಲೆ ನಡೆಸಿದ್ದಾರೆ.

ಕೆ.ಆರ್.ಪುರ ಪೊಲೀಸರು ಆರೋಪಿ ಮಹಮ್ಮದ್ ಖಯೂಂನನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾರ್ಯಕ್ರಮ ಮುಂದೂಡಿಕೆ

ಬೆಂಗಳೂರು: ಕೇಂದ್ರ ಸಚಿವ ಅನಂತಕುಮಾರ್ ಅವರ ನಿಧನದಿಂದ ರಾಜ್ಯದಲ್ಲಿ ಶೋಕಾಚರಣೆ ಜಾರಿಯಲ್ಲಿರುವುದರಿಂದ ಬುಧವಾರ ಬಾಲಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಆಚರಿಸಬೇಕಿದ್ದ ಮಕ್ಕಳ ದಿನಾಚರಣೆಯ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಟಣೆ ತಿಳಿಸಿದೆ.

ದಲಿತರಿಗೆ ಮಂಜೂರಾಗಿದ್ದ ಭೂಮಿ ಕಬಳಿಸಲು ಹುನ್ನಾರ: ಪ್ರತಿಭಟನೆ

ಹಾಸನ: 'ದಲಿತರಿಗೆ ಮಂಜೂರಾಗಿದ್ದ ಭೂಮಿಯನ್ನು ಕೆಲವು ರಿಯಲ್ ಎಸ್ಟೇಟ್ ಮಾಲೀಕರು ಕಬಳಿಸಲು ಹುನ್ನಾರ ನಡೆಸಿದ್ದು, ತಮ್ಮ ಜಮೀನನ್ನು ಉಳಿಸಿಕೊಡಬೇಕು' ಎಂದು ಆಗ್ರಹಿಸಿ ಕಡೆಗರ್ಜೆ ಗ್ರಾಮಸ್ಥರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

'ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಕಡೆಗರ್ಜೆ ಗ್ರಾಮದ ಸರ್ವೆ ನಂ. 41, 29, 30, 31, 32, 33, 34 ಮತ್ತು 35ರಲ್ಲಿ ಗ್ರಾಮದ 16 ಜನ ಭೂ ರಹಿತ ದಲಿತರಿಗೆ ತಲಾ 2.2 ಎಕರೆಯಂತೆ 1970-71ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ. ಎಲ್ಲರಿಗೂ ಸಾಗುವಳಿ ಪತ್ರ ನೀಡಲಾಗಿದೆ. ಆದರೆ, ಕೆಲವರಿಗೆ ಖಾತೆ ಆಗಿದ್ದು, ಕೆಲವರ ಹೆಸರಿಗೆ ಖಾತೆ ಆಗಿಲ್ಲ. ಇತ್ತೀಚೆಗೆ ಕೆಲವು ಅಧಿಕಾರಿಗಳು ರಿಯಲ್ ಎಸ್ಟೇಟ್ ಮಾಲೀಕರ ಜೊತೆಗೆ ಶಾಮೀಲಾಗಿ ದಲಿತರಿಗೆ ನೀಡಿದ್ದ ಭೂಮಿಯನ್ನು ಕಸಿದುಕೊಳ್ಳುವ ಹುನ್ನಾರ ನಡೆಸುತ್ತಿದ್ದಾರೆ' ಎಂದು ಪ್ರತಿಭಟನಾಕಾರರು ಆರೋಪಿಸಿದರು.

'ಕಡೆಗರ್ಜೆ ಗ್ರಾಮದಲ್ಲಿ ನಾವು ವಾಸವಾಗಿರುವ ಭೂಮಿಯೂ ಬೇರೆಯವರ ಹಕ್ಕಿನಲ್ಲಿದೆ. ಈ ಭೂಮಿ ಬಿಟ್ಟರೆ ಬೇರೆ ಎಲ್ಲಿಯೂ ಮನೆ ನಿರ್ಮಿಸಲು ಜಾಗ ಹಾಗೂ ರುದ್ರಭೂಮಿಯೂ ಇಲ್ಲ. ಇಲ್ಲಿನ ಬಹುತೇಕರು ಬಡ ಕೂಲಿ ಕಾರ್ಮಿಕರಾಗಿದ್ದಾರೆ. ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರೆ ವಾಸ್ತವ ತಿಳಿಯಲಿದೆ. ಸರ್ಕಾರವೇ ಭೂಮಿ ಮಂಜೂರು ಮಾಡಿ ಸರ್ಕಾರವೇ ಕಿತ್ತುಕೊಳ್ಳಲು ಬಂದರೆ ಯಾವ ನ್ಯಾಯ, ಹಾಗಾಗಿ ನೊಂದ ಗ್ರಾಮಸ್ಥರಿಗೆ ನ್ಯಾಯ ದೊರಕಿಸಿಕೊಡಬೇಕು, ಅಲ್ಲದೆ ಗ್ರಾಮಸ್ಥರಿಗೆ ಜೀವಬೆದರಿಕೆಯಿದ್ದು, ಸೂಕ್ತ ರಕ್ಷಣೆ ನೀಡಬೇಕು' ಎಂದು ಮನವಿ ಮಾಡಿದರು.

ಕಡೆಗರ್ಜೆ ಗ್ರಾಮಸ್ಥರಾದ ಸುರೇಶ್, ಶಿವರಾಜ್, ನಿಂಗಯ್ಯ, ಪುಟ್ಟರಾಜು ಮತ್ತಿತರರಿದ್ದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಇಂದೂಧರ ಹೊನ್ನಾಪುರ ಆಯ್ಕೆ

ಮೈಸೂರು: ಪಿರಿಯಾಪಟ್ಟಣದಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ 16ನೇ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಹಿರಿಯ ಪತ್ರಕರ್ತ, ಸಾಹಿತಿ ಇಂದೂಧರ ಹೊನ್ನಾಪುರ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಡಾ. ವೈ.ಡಿ. ರಾಜಣ್ಣ ತಿಳಿಸಿದ್ದಾರೆ.

ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಭೆಯಲ್ಲಿ ತಾಲೂಕಿನ ಎಲ್ಲಾ ಅಧ್ಯಕ್ಷರು ಮತ್ತು ಜಿಲ್ಲಾ ಕಸಾಪ ಪದಾಧಿಕಾರಿಗಳು ಭಾಗವಹಿಸಿದ್ದರು. 16ನೇ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿ. 22, 23ರಂದು ಪಿರಿಯಾಪಟ್ಟಣದಲ್ಲಿ ಆಯೋಜಿಸಲಾಗಿದ್ದು, ಜಿಲ್ಲಾ ಸಮ್ಮೇಳನದ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಹಲವಾರು ಹೆಸರುಗಳು ಚರ್ಚೆಗೆ ಒಳಪಟ್ಟು ಅಂತಿಮವಾಗಿ ಪಿರಿಯಾಪಟ್ಟಣ ತಾಲೂಕಿನವರೇ ಆದ ಹಿರಿಯ ಪತ್ರಕರ್ತ ಮತ್ತು ಸಾಹಿತಿ ಇಂದೂಧರ ಹೊನ್ನಾಪುರ ಅವರನ್ನು ಜಿಲ್ಲಾ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ರಾಜಣ್ಣ ತಿಳಿಸಿದ್ದಾರೆ. ಪಿರಿಯಾಪಟ್ಟಣ ತಾಲೂಕಿನ ಹೊನ್ನಾಪುರ ಗ್ರಾಮದಲ್ಲಿ ಜನಿಸಿದ ಇಂದೂಧರ ಅವರು ಮೈಸೂರು ವಿವಿಯಲ್ಲಿ ಸ್ನಾತಕ ಪೂರ್ವ ಶಿಕ್ಷಣ ಮುಗಿಸಿದವರು. ವಿದ್ಯಾರ್ಥಿ ದಿಸೆಯಲ್ಲಿಯೇ 'ಪಂಚಮ' ಎಂಬ ಪತ್ರಿಕೆಯನ್ನು ಹೊರತಂದು ದಲಿತ ಚಳವಳಿಯಲ್ಲಿ ಗುರುತಿಸಿಕೊಂಡವರು. ರಾಜ್ಯಮಟ್ಟದ ಪತ್ರಿಕೆಗಳಲ್ಲಿ ವರದಿಗಾರರಾಗಿ, ವಿವಿಧ ಸ್ಥಾನಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ಮಾಧ್ಯಮಗಳಲ್ಲಿ ಸಮಕಾಲೀನ ಸಾಮಾಜಿಕ ಹಾಗೂ ರಾಜಕೀಯ ವಿಶ್ಲೇಷಣೆಕಾರರಾಗಿಯೂ ಕೆಲಸ ಮಾಡಿದ್ದಾರೆ.

ಇವರಿಗೆ 2016ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ. ಖಾದ್ರಿ ಶಾಮಣ್ಣ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿಗಳೂ ಲಭಿಸಿವೆ. 2010ರಲ್ಲಿ ಪಿರಿಯಾಪಟ್ಟಣದಲ್ಲಿ ನಡೆದ ಮೈಸೂರು ಜಿಲ್ಲಾ 10ನೇ ಸಾಹಿತ್ಯ ಸಮ್ಮೇಳನದಲ್ಲಿ ತಾಲೂಕಿನವರೇ ಆದ ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಕುಣಿಗಲ್: ಸೂರಿಗಾಗಿ ವಿಧವೆ ಮಹಿಳೆ ಮನವಿ

ಕುಣಿಗಲ್: ಕಂಪನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಜಗೆರೆ ಗ್ರಾಮದಲ್ಲಿ ಸುಮಾರು ಏಳು ವರ್ಷದಿಂದ ತೆಂಗಿನ ಗರಿ ಮನೆಯಲ್ಲಿ ವಾಸ ಮಾಡುತ್ತಿರುವ ಬಡ ಕುಟುಂಬ ಕಂಡುಬಂದಿದೆ.

ತಾಲೂಕಿನ ಹುತ್ರಿದುರ್ಗ ಹೋಬಳಿ ಕೆಂಪನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಜಗೆರೆ ಗ್ರಾಮದಲ್ಲಿ ಇಂದಿಗೂ ಕೇವಲ ತೆಂಗಿನ ಗರಿಯ ಮನೆಯಲ್ಲಿ ವಾಸ ಮಾಡುತ್ತಿರುವ ವಿಧವೆ ಗೌರಮ್ಮ ಪತ್ರಿಕೆಯೊಂದಿಗೆ ಮಾತನಾಡಿ, ನಾನು ಭೋವಿ ಜನಾಂಗದವಳು, ಅವಿದ್ಯಾವಂತೆ, ಗಂಡನನ್ನು ಕಳೆದುಕೊಂಡು ಸುಮಾರು ವರ್ಷಗಳಾಗಿವೆ. ನನಗೆ ವಾಸಿಸುವುದಕ್ಕೆ ಮನೆ ಇಲ್ಲ, ನಾನು ಕೂಲಿ ನಾಲಿ ಮಾಡಿ ಜೀವನ ನಡೆಸುತ್ತಿದ್ದೇನೆ. ಗ್ರಾಮ ಪಂಚಾಯಿತಿಯವರು ನಮಗೆ ವಾಸಿಸಲು ಮನೆ ನಿರ್ಮಾಣ ಮಾಡಿಕೊಟ್ಟಿಲ್ಲ. ಪಂಚಾಯಿತಿಗೆ ಅರ್ಜಿ ನೀಡುವುದಕ್ಕೆ ನಾನು ಅವಿದ್ಯಾವಂತೆ ಮತ್ತು ನನಗೆ ಆರೋಗ್ಯ ಸರಿಯಿಲ್ಲ. ಅವರಿವರ ಕೈ, ಕಾಲು ಹಿಡಿದು ತೆಂಗಿನ ಗರಿ ತಂದು ಅದರಿಂದಲೇ ಮನೆ ನಿರ್ಮಾಣ ಮಾಡಿಕೊಂಡು ವಾಸಿಸುತ್ತಿದ್ದೇನೆ ಎಂದು ತನ್ನ ಅಳಲನ್ನು ತೋಡಿಕೊಂಡರು.

ಸಂಬಂಧಪಟ್ಟಂತಹ ಅಧಿಕಾರಿಗಳು ನನಗೆ ಒಂದು ಮನೆ ನಿರ್ಮಾಣ ಮಾಡಿಕೊಟ್ಟು ನನಗೆ ಆಸರೆಯಾಗಬೇಕೆಂದು ಪತ್ರಿಕೆ ಮೂಲಕ ಮನವಿ ಮಾಡಿದರು.

ಕೃಷಿ ಕ್ಷೇತ್ರದಲ್ಲಿ ಸುಧಾರಿತ ಬೇಸಾಯ ಪದ್ಧತಿ, ತಜ್ಞರೊಂದಿಗೆ ಚರ್ಚೆ

ಹಾಸನ: ರೈತರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ನ. 15ರಿಂದ 18ರವರೆಗೆ ಕೃಷಿ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಕಂದಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ರಾಜೇಗೌಡ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ರಾಜ್ಯ ಸರ್ಕಾರದ ಕೃಷಿ, ಜಲಾನಯನ ಅಭಿವೃದ್ಧಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ, ಕೃಷಿ ಮಾರುಕಟ್ಟೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ಹಾಲು ಮಹಾಮಂಡಳಿಗಳ ಸಂಯುಕ್ತಾಶ್ರಯದಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ನಾಲ್ಕು ದಿನ ಮೇಳ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನ. 15ರಂದು ಮೇಳವನ್ನು ರಾಜ್ಯಪಾಲ ವಜುಬಾಯಿ ವಾಲಾ ಉದ್ಘಾಟಿಸುವರು. ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಕೃಷಿ ಸಚಿವ ಎನ್.ಎಚ್. ಶಿವಶಂಕರ ರೆಡ್ಡಿ ಹಾಗೂ ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು. ಕೃಷಿ ವಿಶ್ವವಿದ್ಯಾನಿಲಯದಿಂದ ರಾಗಿ (ಕೆಎಂಆರ್-650), ಸೂರ್ಯಕಾಂತಿ (ಕೆಬಿಎಸ್‌ಎಚ್-78), ಸೋಯಾ ಅವರೆ (ಕೆಬಿಎಸ್-23) ಮತ್ತು ಅಕ್ಕಿ ಅವರೆ (ಕೆಬಿಆರ್-1) ಎಂಬ ನೂತನ ತಳಿಗಳನ್ನು ಬಿಡುಗಡೆಗೆ ಸಿದ್ಧವಾಗಿದೆ ಎಂದರು.

ನ. 15ರಂದು ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರದ ಜಿಲ್ಲೆಗಳ ರೈತರು, ನ. 16ರಂದು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ರೈತರು, ನ. 17ರಂದು ಹಾಸನ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳ ರೈತರು ಮತ್ತು ನ. 18ರಂದು ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ರೈತರು, ವಿಸ್ತರಣಾ ಕಾರ್ಯಕರ್ತರು ಮತ್ತು ಸಾರ್ವಜನಿಕರು ಭೇಟಿ ನೀಡಬಹುದಾಗಿದೆ ಎಂದರು.

ಕೃಷಿ ವಿಜ್ಞಾನಿಗಳಾದ ಶಿವಶಂಕರ್, ವಿನುತ, ಕಾರ್ಯಕ್ರಮ ಸಹಾಯಕ ಗಿರೀಶ್ ಇದ್ದರು.

15ಕ್ಕೂ ಹೆಚ್ಚು ವಾಹನಗಳು ಜಖಂ: ಬೆಚ್ಚಿಬಿದ್ದ ಗದಗ ಜನ

ಗದಗ: ಮನೆ ಮುಂದೆ ನಿಲ್ಲಿಸಿದ್ದ 15ಕ್ಕೂ ಹೆಚ್ಚು ವಾಹನಗಳನ್ನು ರಾತ್ರೋರಾತ್ರಿ ದುಷ್ಕರ್ಮಿಗಳು ಜಖಂಗೊಳಿಸಿರುವ ಘಟನೆ ನಗರದಲ್ಲಿ ನಡೆದಿದೆ.

ಗದಗ ಪಟ್ಟಣದ ಪಂಚಾಕ್ಷರಿ ನಗರ, ರೈಲ್ವೆ ಕ್ವಾಟ್ರಸ್, ಹಾತಲಗೇರಿ ನಾಕಾ ಸೇರಿದಂತೆ ಇತರೆಡೆ ಈ ದುಷ್ಕೃತ್ಯ ನಡೆದಿದೆ. ಕುಡಿದ ಮತ್ತಿನಲ್ಲಿ ಕೆಲ ಪುಡಾರಿಗಳು ಸೇರಿಕೊಂಡು ಈ ಕೃತ್ಯವೆಸಗಿರುವ ಶಂಕೆ ವ್ಯಕ್ತವಾಗಿದೆ.

ಈ ದುಷ್ಕೃತ್ಯದಿಂದ ಆತಂಕಗೊಂಡಿರುವ ಬಡಾವಣೆಯ ಜನರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ಸಿಸಿ ಟಿವಿ ದೃಶ್ಯ ಆಧರಿಸಿ ಖದೀಮರ ಬಂಧನಕ್ಕೆ ಬಲೆ ಬೀಸಿದ್ದಾರೆ.

ಅನಂತ್‌ಕುಮಾರ್ ದೆಹಲಿಯ ಕರ್ನಾಟಕ ಬ್ರಾಂಡ್ ಅಂಬಾಸಿಡರ್ ಆಗಿದ್ದರು: ಗೋ. ಮಧುಸೂದನ್



ಮೈಸೂರು: ನಮ್ಮನ್ನಗಲಿರುವ ಅನಂತ್‌ಕುಮಾರ್ ಅವರು ದೆಹಲಿಯಲ್ಲಿ ಕರ್ನಾಟಕದ ಪರ್ಮನೆಂಟ್ ಬ್ರಾಂಡ್ ಅಂಬಾಸಿಡರ್ ಆಗಿದ್ದರು ಎಂದು ರಾಜ್ಯ ಬಿಜೆಪಿ ವಕ್ತಾರ ಗೋ. ಮಧುಸೂದನ್ ಬಣ್ಣಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅನಂತಕುಮಾರ್ ಅವರ ತಂದೆ ನನ್ನ ತಂದೆ ಸ್ನೇಹಿತರಾಗಿದ್ದರು. ನನ್ನ ಅವರ ಸ್ನೇಹ 30 ವರ್ಷಗಳಿಗೂ ಮಿಗಿಲಾಗಿದ್ದು, ಅನಂತ್ ಇಲ್ಲ ಅನ್ನೋದೆ ಬಿಜೆಪಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ ಎಂದು ದುಃಖಿಸಿದ್ದಾರೆ. ಅವರೊಬ್ಬ ಉತ್ತಮ ಸಂಸದೀಯ ಪಟು ಎನ್ನುವುದರಲ್ಲಿ ಅನುಮಾನ ಇಲ್ಲ.

ಕರ್ನಾಟಕದ ರಾಜಕಾರಣಿಗಳು ರಾಷ್ಟ್ರೀಯ ನಾಯಕರಾಗಿದ್ದು ಇವರಿಂದಲೇ ಎಂದರು.

ಅನಂತಕುಮಾರ್ ಇಂಗ್ಲಿಷ್, ಹಿಂದಿಯಲ್ಲಿ ಅಪಾರ ಜ್ಞಾನ ಹೊಂದಿದ್ದರು. ಹಿರಿಯ ಮುತ್ಸದ್ದಿಯಾಗಿ ಸಂಸತ್‌ನ ಪ್ರತಿನಿಧಿಯಾಗಿದ್ದರು. ಬಿಜೆಪಿ ಅಷ್ಟೇ ಅಲ್ಲ, ಎಲ್ಲ ಪಕ್ಷದ ನಾಯಕರ ಜೊತೆ ಸ್ನೇಹಜೀವಿಯಾಗಿದ್ದರು.

ಮಂಡ್ಯ: ಬಿಎಸ್‌ಪಿ ಪಕ್ಷದ ವಿಭಾಗ ಮಟ್ಟದ ಸಭೆ

ಮಂಡ್ಯ: ಬಹುಜನರು ಸ್ವಂತ ಪಕ್ಷದಿಂದ ದೇಶವನ್ನು ಆಳುವ ವರ್ಗವಾಗಬೇಕೆಂಬ ಆಶಯ ಕಾನ್ಷಿರಾಂ ಅವರದ್ದಾಗಿತ್ತು.

ಮುಂದಿನ ದಿನಗಳಲ್ಲಿ ಅವರ ಕನಸು ಈಡೇರುವ ಕಾಲ ಒದಗಿಬರಲಿದೆ ಎಂದು ಬಹುಜನ ಸಮಾಜ ಪಾರ್ಟಿ ರಾಜ್ಯ ಸಂಯೋಜಕ ಎಂ.ಎಲ್. ತೋಮರ್ ಹೇಳಿದರು.

ಬಹುಜನ ಸಮಾಜ ಪಾರ್ಟಿ ವತಿಯಿಂದ ನಗರದ ವಿಠಲ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಪದಾಧಿಕಾರಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಎಲ್ಲಾ ಚುನಾವಣೆಗಳು ಮೈತ್ರಿಗೆ ಒಳಪಡುತ್ತಿವೆ. ಅದರಲ್ಲೂ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಸೇರಿದಂತೆ ದೊಡ್ಡ ರಾಜ್ಯಗಳು ಬಿಎಸ್ಪಿ ಅಧ್ಯಕ್ಷೆ ಮಾಯಾವತಿ ಅವರನ್ನು ಮೈತ್ರಿಗೆ ಆಹ್ವಾನಿಸುತ್ತಿವೆ. ಇದು ಕಾನ್ಷಿರಾಂ ಅವರ ಸಾಧನೆ ಎಂದು ಬಣ್ಣಿಸಿದರು.

ಕಾನ್ಷಿರಾಂ ಅವರು ಬಹುಜನರು ಸ್ವಂತ ಪಕ್ಷದಿಂದ ದೇಶವನ್ನು ಆಳುವ ವರ್ಗವಾಗಬೇಕು ಎಂಬ ಕನಸು ಹೊಂದಿದ್ದರು. ಇಂತಹ ಸಮುದಾಯವು ರಾಜಕೀಯವಾಗಿ ಪ್ರಜ್ಞಾವಂತರಾಗಬೇಕು. ಶೈಕ್ಷಣಿಕವಾಗಿ ಮೇಲೆ ಬರಬೇಕು ಎಂದು ಕರೆ ನೀಡಿದರು.

ಮಾಜಿ ಸಚಿವ, ಬಿಎಸ್‌ಪಿ ರಾಜ್ಯ ಸಂಯೋಜಕ ಎನ್. ಮಹೇಶ್ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶವನ್ನು ಶೋಷಿತ ಸಮುದಾಯಗಳು ಆಡಳಿತ ನಡೆಸಬೇಕು ಎಂಬುದು ಅಂಬೇಡ್ಕರ್‌ರವರ ಕನಸಾಗಿತ್ತು. ಇಂತಹ ಕನಸು ಹಾಗೆಯೇ ಉಳಿದಿದೆ.

ಬಹುಜನ ಸಮಾಜ ಪಕ್ಷ ನನಸು ಮಾಡಲು ಭೀಮ ರಥವಾಗಿ ತೆರಳುತ್ತಿದೆ. ಕಾರ್ಯಕರ್ತರು ಸಾಧ್ಯವಾದರೆ ರಥವನ್ನು ಎಳೆಯಿರಿ. ಹಿಂದೆ ತಳ್ಳಬೇಡಿ ಎಂದು ಮನವಿ ಮಾಡಿದರು.

ಮುಖಂಡರಾದ ಅರಕಲವಾಡಿ ನಾಗೇಂದ್ರ, ಮಾದೇಶ್ ಉಪ್ಪಾರ್, ಸಿದ್ದಯ್ಯ, ಕರಾಟೆ ಸಿದ್ದರಾಜು, ಗಂಗಾಧರ್ ಬಹುಜನ್, ನಾಗೇಶ್, ನರಸಿಂಹಮೂರ್ತಿ, ನಲ್ಲಹಳ್ಳಿ ಸುರೇಶ್, ಕೃಷ್ಣಪ್ಪ, ಅತ್ನ ಹರೀಶ್, ಎಂ. ಕೃಷ್ಣಮೂರ್ತಿ ಮತ್ತಿತರರು ಪಾಲ್ಗೊಂಡಿದ್ದರು.

ಸೈಟು ಹಂಚಿಕೆಯಲ್ಲಿ ಅಕ್ರಮ: ನಿವೇಶನ ವಂಚಿತರ ಆರೋಪ

ಮೈಸೂರು: ಟಿ.ನರಸೀಪುರ ತಾಲೂಕಿನ ನಿಲಸೋಗೆ ಗ್ರಾಮದ ಪರಿಶಿಷ್ಟರಿಗೆ ನಿವೇಶನ ಹಂಚಿಕೆ ವಿಚಾರದಲ್ಲಿ ತಹಶೀಲ್ದಾರ್ ಅವರ ಮೇಲಿನ ಆರೋಪ ಸತ್ಯಕ್ಕೆ ದೂರವಾಗಿದ್ದು, ಸೈಟು ಹಂಚಿಕೆಯಲ್ಲಿ ಅಕ್ರಮ ನಡೆದಿದ್ದು ಇದಕ್ಕೆ ಮಾದಾಪುರ ಗ್ರಾ.ಪಂ. ಪಿಡಿಒ ಲಿಂಗರಾಜು ಕಾರಣ ಎಂದು ನಿವೇಶನ ವಂಚಿತರು ಆರೋಪಿಸಿದ್ದಾರೆ.

ಸೋಮವಾರ ತಾಲೂಕು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಿವೇಶನ ವಂಚಿತರಲ್ಲಿ ಒಬ್ಬರಾದ ಗೀತಾ ಮಾತನಾಡಿ, ಗ್ರಾಮದಲ್ಲಿ ನಿವೇಶನ ರಹಿತ ಫಲಾನುಭವಿಗಳನ್ನು ಗುರುತಿಸಲು ಮೇ 3, 2017ರಂದು ಗ್ರಾಮ ಸಭೆ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ನಿವೇಶನ ರಹಿತರನ್ನು ಗುರುತಿಸಿ ಅವರಿಗೆ ಸರ್ಕಾರಿ ಭೂಮಿ ಒಂದು ಎಕರೆ ಮೂವತ್ತ ನಾಲ್ಕು ಗುಂಟೆ (74 ಗುಂಟೆ) ಜಮೀನಿನಲ್ಲಿ 30*40 ಅಡಿ ಅಳತೆ ನಿವೇಶನ ನೀಡುವ ಬಗ್ಗೆ ತೀರ್ಮಾನಿಸಿ ಸಭೆಯಲ್ಲಿ 50 ಮಂದಿ ಅರ್ಹರನ್ನು ಗುರುತಿಸಲಾಗಿತ್ತು. ಆದರೆ ತದ ನಂತರ ಪಿಡಿಒ ಲಿಂಗರಾಜುರವರು ಗ್ರಾಮದ ಕೆಲವರ ಚಿತಾವಣೆ ಮೇರೆಗೆ ಅನರ್ಹರ ಆಮಿಷಕ್ಕೊಳಗಾಗಿ ನೀವೇಶನವುಳ್ಳವರನ್ನು ಪಟ್ಟಿಯಲ್ಲಿ ಹೆಚ್ಚುವರಿಯಾಗಿ ಸೇರಿಸಿ ಒಟ್ಟು 74 ಮಂದಿಗೆ ಹಂಚಿಕೆ ಮಾಡಿ ಕೆಲವು ಅರ್ಹರನ್ನು ಕೈಬಿಟ್ಟಿದ್ದಾರೆ. ಜತೆಗೆ ಗ್ರಾಮದ ಕೆಲವು ಗ್ರಾ.ಪಂ. ಸದಸ್ಯರು ಮನೆ, ನಿವೇಶನ ಉಳ್ಳವರಾಗಿದ್ದರೂ ಅಕ್ರಮವಾಗಿ ಪಟ್ಟಿಯಲ್ಲಿ ತಮ್ಮ ಹೆಸರು ಸೇರಿಸಿಕೊಂಡಿದ್ದು, ಸೈಟು ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂದು ವಂಚಿತರು ದೂರು ಕೊಟ್ಟಿರುವುದರಿಂದ ಹೊಸದಾಗಿ ಬಂದ ತಹಶೀಲ್ದಾರ್ ಹಕ್ಕುಪತ್ರ ನೀಡುವ ಮುನ್ನ ಪರಿಶೀಲಿಸುವುದಾಗಿ ಹೇಳಿದ್ದರಿಂದ ಇವರ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ, ಉದಯಕುಮಾರ, ಕುಮಾರ, ಪ್ರಸಾದ್, ಗೀತಾ, ಮಂಗಳಮ್ಮ, ಕೆಂಪಮ್ಮ ಹಾಜರಿದ್ದರು.